**FDP No.3/2017**
**PW-1**

ದಿನಾಂಕಃ 16-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 6 ಮತ್ತು 7 ನೇ ಎದುರುದಾರರ ಪರ ಶ್ರೀ ಜಿ ಎಂ ಎಂ ವಕೀಲರಿಂದಃ**

ನನಗೆ ಈಗ 30 ವರ್ಷ ಆಗಿದೆ. ನಾನು ಮೊಬೈಲ್ ರೀಚಾರ್ಜ್ ಅಂಗಡಿ ನಡೆಸುತ್ತಿದ್ದೇನೆ. ಅದನ್ನು ಹೊರತು ಪಡಿಸಿ ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ನಿಮ್ಮ ಉದ್ಯೋಗ ವ್ಯವಸಾಯ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ನಾನು ಅದನ್ನು ಓದಿಲ್ಲ ಎಂದು ನುಡಿಯುತ್ತಾರೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಉಳಿದ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ತಾತನಿಗೆ 06 ಜನ ಮಕ್ಕಳಿರುತ್ತಾರೆ ಎಂದರೆ ಸರಿ. ಶಾಂತಾಬಾಯಿ ರವರು ಈಶ್ವರಪ್ಪ ರವರ ಹೆಂಡತಿ ಆಗಿರುತ್ತಾರೆ ಎಂದರೆ ಸರಿ.

2. ನನ್ನ ತಂದೆ ಪಾಲು ವಿಭಾಗಕ್ಕಾಗಿ ದಾವೆ ದಾಖಲಿಸಿದ್ದರು ಎಂದರೆ ಸರಿ. ನಿಆರ್ 21 ರ ವಾದ ಪತ್ರದಲ್ಲಿ 6 ಮತ್ತು 7 ನೇ ಎದುರುದಾರರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ಸದರಿ ವಾದ ಪತ್ರದ 2 ನೇ ಪುಟದಲ್ಲಿನ ಕುಟುಂಬದ ವಂಶಾವಳಿಯಲ್ಲಿ ಸದರಿ ಎದುರುದಾರರ ಹೆಸರನ್ನು ನಮೂದು ಮಾಡಿರಲಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ವಾಡಿಯಲ್ಲಿನ ಆಸ್ತಿಗಳನ್ನು ಸೇರಿಸಿರಲಿಲ್ಲ ಎಂದರೆ ಸರಿ. ಯಾದಗಿರಿಯಲ್ಲಿನ ಆಸ್ತಿಗಳು ನಮ್ಮ ಹಿರಿಯರ ಆಸ್ತಿಗಳು ಆಗಿರುತ್ತವೆ ಎಂದರೆ ಸರಿ. ಸದರಿ ನಿಆರ್-14 ರಿಂದ 20 ರಲ್ಲಿನ ದಾಖಲೆಗಳಲ್ಲಿ ಈ ವರೆಗೆ ನನ್ನ ಅಜ್ಜಿ ಶರಣಮ್ಮ ರವರ ಹೆಸರಿನಲ್ಲಿ ಇದ್ದಾವೆ ಎಂದರೆ ಸರಿ. ಅರ್ಜಿದಾರರು ಮತ್ತು ಎದುರುದಾರರ ಒಂದೇ ಕುಟುಂಬದವರಾಗಿರುತ್ತಾರೆ ಎಂದರೆ ಸಾಕ್ಷಿಯು ನನ್ನ ದೊಡ್ಡಪ್ಪ ಈಶ್ವರಪ್ಪ ರವರು ತಮ್ಮ ಮದುವೆಯ ನಂತರ ವಾಡಿಯಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಬೇರೆಯಾಗಿ ವಾಸವಾಗಿದ್ದರೂ ಸಹ ಅವರುಗಳ ನಡುವೆ ಪಾಲುವಿಭಾಗ ಆಗಿಲ್ಲ ಎಂದರೆ ಸರಿ.

3. ವಾಡಿಯಲ್ಲಿನ ಪಂಚಾಯಿ ನಂ.6-20/2 ರ ಆಸ್ತಿಯನ್ನು ಅವಿಭಕ್ತ ಕುಟುಂಬದ ಆದಾಯದಿಂದ ಶಾಂತಮ್ಮ ಗಂಡ ಈಶ್ವರಪ್ಪ ರವರ ಹೆಸರಿನಲ್ಲಿ ಖರೀದಿ

ಮಾಡಲಾಗಿತ್ತು ಎಂದರೆ ಸಾಕ್ಷಿಯು ಸರಿ ಎಂದು ನುಡಿಯುತ್ತಾರೆ. (ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರಾದ ಶ್ರೀ ಎಸ್.ಕೆ ರವರು ಸಾಕ್ಷಿಗೆ ನಿಮಗೆ ಅವಿಭಕ್ತ ಕುಟುಂಬ ಎಂಬ ಪದದ ಅರ್ಥ ಗೊತ್ತಿದೆಯೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.) ಅವಿಭಕ್ತ ಕುಟುಂಬ ಎಂದರೆ ಜಂಟಿ ಕುಟುಂಬ ಆಗಿರುತ್ತದೆ ಎಂದರೆ ಸರಿ. ನಿಆರ್-7 ರ ದಾಖಲೆಯಲ್ಲಿ ಮನೆ ನಂ.72 ಮತ್ತು 73 ಶಾಂತಬಾಯಿ ರವರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ಪಂಚಾಯಿತಿ ನಂ.6-20/2 ರ ಸಂಖ್ಯೆ ನಂತರ ಮನೆ ನಂ.8-72 ಮತ್ತು 8-73 ಎಂದು ಬದಲಾಗಿರುತ್ತದೆ ಎಂದರೆ ಸರಿ.

4. ಶಾಂತಬಾಯಿ ರವರು ಮರಣಹೊಂದಿದ್ದಾರೆ ಎಂದರೆ ಸರಿ. ಶಾಂತಬಾಯಿ ಮರಣಹೊಂದಿದ ನಂತರ ಅವರ ಗಂಡ ಈಶ್ವರಪ್ಪ ಮರಣಹೊಂದಿರುತ್ತಾರೆ ಎಂದರೆ ಸರಿ. ಆ ನಂತರ ಈಶ್ವರಪ್ಪ ರವರ ತಾಯಿ ಶರಣಪ್ಪ ಮರಣಹೊಂದಿರುತ್ತಾರೆ ಎಂದರೆ ಸರಿ. ವಾಡಿಯ ಮನೆ ನಂ.8-72 ಹಾಗೂ 8-73 ರ ಆಸ್ತಿಗಳು ಕಂದಾಯ ಪಾವತಿಗಾಗಿ ನಿಮ್ಮ ತಂದೆಯ ಹೆಸರಿನಲ್ಲಿ ಇದ್ದವು ಎಂದರೆ ಸಾಕ್ಷಿಯು ಶಾಂತಬಾಯಿ ರವರಿಗೆ ಸದರಿ ಆಸ್ತಿಗಳನ್ನು ಅವರ ತವರು ಮನೆಯವರು ಖರೀದಿಸಿ ಕೊಟ್ಟಿದ್ದರು, ನಂತರ ಶಾಂತಬಾಯಿ ರವರು ಮರಣಹೊಂದಿದ ನಂತರ ನನ್ನ ತಂದೆ ಹಾಗೂ ನನ್ನ ಅಜ್ಜಿ ಸದರಿ ಆಸ್ತಿಯನ್ನು ಸಿಂದಗಿ ಅಂಬಾಬಾಯಿ ದೇವಸ್ಥಾನಕ್ಕೆ ಧಾನವಾಗಿ ಕೊಟ್ಟಿದ್ದರು ಆ ನಂತರ ಸದರಿ ದೇವಸ್ಥಾನದವರು ನಾನು ಅಪ್ರಾಪ್ತ ವಯಸ್ಕನಾಗಿದ್ದರಿಂದ ನನ್ನ ತಂದೆಗೆ ಆಸ್ತಿ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಶಾಂತಬಾಯಿ ರವರಿಗೆ ಅವರ ತವರು ಮನೆಯವರು ಆಸ್ತಿ ಖರೀದಿಸಿ ಕೊಟ್ಟಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ತವರು ಮನೆಯವರು ಆಸ್ತಿ ಖರೀದಿಸಿ ಕೊಟ್ಟಿದ್ದಾರೆ ಎಂದು ನಿಆರ್-11 ಖರೀದಿ ಪತ್ರದಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ಖರೀದಿಸಲು ಹಣ ಕೊಟ್ಟಿದ್ದರು ಆದರೆ ಪತ್ರದಲ್ಲಿ ನಮೂದಿಸಿಲ್ಲ ಎಂದು ನುಡಿಯುತ್ತಾರೆ. ತವರು ಮನೆಯವರು ಆಸ್ತಿ ಖರೀದಿಗೆ ಹಣ ನೀಡಿಲ್ಲ ಹಾಗೂ ಅವರಿಗೂ ಮತ್ತು ಸದರಿ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ತವರು ಮನೆಯ ಹಣದಿಂದ ಆಸ್ತಿ ಖರೀದಿಸಿದ್ದಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ನನ್ನ ತಂದೆ ಹಾಗೂ ಅಜ್ಜಿ ಅಸ್ತಿಯನ್ನು ದೇವಸ್ಥಾನಕ್ಕೆ ದಾನ ಮಾಡಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

5. ನಿಆರ್-24 ಹಾಗೂ 25 ರ ದಾನ ಪತ್ರಕ್ಕೆ 6 ಮತ್ತು 7 ನೇ ಎದುರುದಾರರು ಪಕ್ಷಗಾರರಾಗಿರುವುದಿಲ್ಲ ಹಾಗೂ ಸಾಕ್ಷಿದಾರರು ಸಹ ಆಗಿರುವುದಿಲ್ಲ ಎಂದರೆ ಸರಿ. ಸದರಿಯವರಿಗೆ ಗೊತ್ತಿಲ್ಲದೇ ನಾವು ನಿಆರ್-24 ಮತ್ತು 25 ರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಪತ್ರಗಳ ಆಧಾರದ ಮೇಲೆ ನಾನು ಹಾಗೂ ನನ್ನ ತಾಯಿ ಯಾವುದೇ ಕಾನೂನಾತ್ಮಕ ಹಕ್ಕು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಾಡಿಯ ಆಸ್ತಿ ನಂ.8-73/1 ರ ಆಸ್ತಿಯನ್ನು ಜಂಟಿ ಕುಟುಂಬದ ಆದಾಯದಿಂದ ನಿಮ್ಮ ತಂದೆಯ ಹೆಸರಿನಲ್ಲಿ ಖರೀದಿಸಲಾಗಿದೆ ಎಂದರೆ ಸಾಕ್ಷಿಯು ನನ್ನ ತಂದೆ ಎಸಿಸಿ ಸಿಮೆಂಟ್ ಕಾರ್ಖಾನೆಯಲ್ಲಿ ಕೆಲಸ ಮಾಡಿ ಬಂದ ಗಳಿಕೆಯಿಂದ ಖರೀದಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಪಶ್ಚಿಮಕ್ಕೆ ನನ್ನ ಅಜ್ಜಿ ಶರಣಮ್ಮ ಗಂಡ ಶಿವಲಿಂಗಪ್ಪ ರವರ ಮನೆ ಇರುವುದಾಗಿ ನಿಪಿ-12 ರ ಖರೀದಿ ಪತ್ರದಲ್ಲಿ ನಮೂದಿಸಲಾಗಿದೆ ಎಂದರೆ ಸರಿ. ಶಾಂತಬಾಯಿ ರವರ ಹೆಸರಿನಲ್ಲಿ ಖರೀದಿಸಿದ್ದ ಆಸ್ತಿ ಆಗ ನನ್ನ ಅಜ್ಜಿ ಶರಣಮ್ಮ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ವಾಡಿಯಲ್ಲಿನ ಆಸ್ತಿಯೂ ಸಹ ಜಂಟಿ ಕುಟುಂಬದ ಆಸ್ತಿಯಾಗಿದ್ದು ಅದರಲ್ಲಿ ಶರಣಮ್ಮ ರವರ ಎಲ್ಲಾ ಮಕ್ಕಳಿಗೂ ಪಾಲು ಇದೆ ಎಂದರೆ ಸರಿಯಲ್ಲ. ನಿವೇಶನ ನಂ.8-73/1 ರ ಆಸ್ತಿಯನ್ನು ನನ್ನ ತಂದೆ ತಮ್ಮ ಸ್ವಂತ ಗಳಿಕೆಯಿಂದ ಖರೀದಿಸಿದ್ದಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

6. 6 ಮತ್ತು 7 ನೇ ಎದುರುದಾರರ ಈಗಲೂ ವಾಡಿಗೆ ಬರುವುದು-ಹೋಗುವುದು ಮಾಡುತ್ತಾರೆ ಎಂದರೆ ಸರಿಯಲ್ಲ. ಅವರು ಈಗ ಬರುವುದಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 6 ಮತ್ತು 7 ನೇ ಎದುರುದಾರರಿಗೆ ಪಾಲು ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ನಿಮ್ಮ ತಂದೆ ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸಾಕ್ಷಿಯು ಅದಕ್ಕಿಂತ ಪೂರ್ವದಲ್ಲಿಯೇ ಸದರಿ ಎದುರುದಾರರು ದಾವೆ ದಾಖಲು ಮಾಡಿದ್ದರು ಎಂದು ನುಡಿಯುತ್ತಾರೆ. ಸದರಿಯವರು ದಾವೆ ದಾಖಲು ಮಾಡಿದ್ದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅವರಿಗೆ ಪಾಲು ಕೊಡಬಾರದೆಂಬ ಉದ್ದೇಶದಿಂದ ನಿಆರ್-21 ರ ವಾದ ಪತ್ರದಲ್ಲಿ 6 ಮತ್ತು 7 ನೇ ಎದುರುದಾರರ ಹೆಸರುಗಳನ್ನು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಅಥವಾ ನನ್ನ ತಂದೆ ವಾಡಿಯಲ್ಲಿನ ಆಸ್ತಿಗಳ ಸಂಪೂರ್ಣ ಮಾಲಿಕರಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿಯ ಜೀವಿತಾವದಿಯಲ್ಲಿ ಅವರ ಎಲ್ಲಾ ಮಕ್ಕಳು ಅವರೊಂದಿಗೆ

ವಾಡಿಯಲ್ಲಿನ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. 6 ಮತ್ತು 7 ನೇ ಎದುರುದಾರರಿಗೆ ಪಾಲು ಕೊಡಬಾರದೆಂಬ ಉದ್ದೇಶದಿಂದ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ **ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ